ಹಿತವುಂಟುಮಾಡುವ ಸಹಜ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ವಸ್ತುಸಮೃದ್ಧಿಯ ಜೊತೆಗೆ ಆಧ್ಯಾತ್ಮಿಕ ಸಂಪತ್ತೂ ಇರಬೇಕು. ಇದು ಜೆ.ಕೃಷ್ಣಮೂರ್ತಿಯವರು ಹೇಳುವ, "Prosperity with Austerity" ಎಂಬ ಮಾತಿನಂತೆ. ಯಾವಾಗ ಈ ಎರಡೂ ಪರಸ್ಪರ ಪೂರಕವಾಗಿರುತ್ತವೆಯೋ, ಆಗ ಮಾತ್ರ ಅಭಿವೃದ್ಧಿ, ಸಂತೋಷ ಎರಡೂ ಸಾಧ್ಯ. ಸಂತೋಷವನ್ನೇ ಪಡೆಯಲಾಗದ ಅಭಿವೃದ್ಧಿಯಿಂದ ನಮಗೆ ಆಗಬೇಕಾದ್ದಾದರೂ ಏನು? ಹಾಗಾಗಿ ಭೂತಾನ್ ಅಧ್ಯಯನ ಕೇಂದ್ರದ ಪ್ರಕಾರ, ಸಾಂಸ್ಕೃತಿಕ ಮೌಲ್ಯಗಳು, ನೈಜ ಪ್ರಕೃತಿ ಸಂಪತ್ತು, ಉತ್ತಮ ಆಡಳಿತ ಮತ್ತು ಸುಸ್ಥಿರ ಅಭಿವೃದ್ಧಿಗಳು ಜೊತೆಜೊತೆಗೆ ಸಾಗುತ್ತವೆ. ಈ ನಾಲ್ಕು ಸ್ತಂಭಗಳ ಮೇಲೆ ಮಾತ್ರ GNH ಸೌಧವು ನಿಂತಿದೆ. ಕೇವಲ ಬೌದ್ಧಧರ್ಮವನ್ನು ಹೊಂದಿರುವ ದೇಶಗಳಿಗೆ ಮಾತ್ರ ಈ ಸಮೀಕರಣ ಅನ್ವಯವಾಗುತ್ತದೆ ಎಂದು ಭಾವಿಸಬೇಕಾಗಿಲ್ಲ. ಭೂತಾನಿನ ಈ ಅಧ್ಯಯನ ಕೇಂದ್ರದ ಪ್ರಕಾರ ಆಯಾ ದೇಶದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಿಸರಕ್ಕನುಗುಣವಾಗಿ ಪ್ರತಿಯೊಂದು ದೇಶವೂ ಮೇಲಿನ ನಾಲ್ಕು ಸ್ತಂಭಗಳ ಮೇಲೆ GNH ಅನ್ನು ನಿರ್ಮಾಣ ಮಾಡಬಹುದು.

ದಿನಕಳೆದಂತೆ ಸ್ವಾಮೀಜಿಯವರು ಕೇಳಿದ ಮೇಲಿನ ಪ್ರಶ್ನೆಯ ಮಹತ್ವ ಹೆಚ್ಚಾಗುತ್ತ ಹೋಗುತ್ತಿದೆ. ಈಗ ಚಲಾವಣೆಯಲ್ಲಿರುವ GDP ಎಂದರೆ **'ಒಟ್ಟು ರಾಷ್ಟ್ರೀಯ ಉತ್ಪನ್ನ'** ವನ್ನು (Gross Domestic product - GDP) ಪ್ರಗತಿಸೂಚಕವಾಗಿ ಪರಿಗಣಿಸುತ್ತೇವೆ. ಈ GDP ಅನ್ನು ಅಳೆಯುವ ಸಾಧನವಾದರೂ ಏನು? ಕೈಗಳನ್ನು ಬದಲಿಸುವ ಹಣದ ಮೊತ್ತದ ಪ್ರಮಾಣಕ್ಕೆ ಅನುಗುಣವಾಗಿ ಉತ್ಪಾದನೆಯಾಗಿದೆ ಎಂದು ಭಾವಿಸುತ್ತ, ಇದೇ ಪ್ರಗತಿ ಎಂದು ನಂಬುವ ಒಂದು ಸಮೀಕರಣವೇ GDP. ಈ ನಂಬಿಕೆ ಹೇಗೆ ಕೆಲಸ ಮಾಡುತ್ತದೆ ಎಂದು ದೇವಿಂದರ್ ಶರ್ಮ ಎಂಬ ಲೇಖಕರು ಹೀಗೆ ವಿವರಿಸುತ್ತಾರೆ: ಒಂದು ಮರದ ಸಸಿಯನ್ನು ನೆಟ್ಟು ಬೆಳೆಸಿದರೆ GDP ಹೆಚ್ಚಾಗುವುದಿಲ್ಲ. ಆದರೆ ಅನೇಕ ದಶಕಗಳ ಕಾಲ ಬೆಳೆದ ಮರವನ್ನು ಕತ್ತರಿಸಿ ಮಾರಿದರೆ GDP ಹೆಚ್ಚಾಗುತ್ತದೆ ! ಒಟ್ಟಿನಲ್ಲಿ ಇಡೀ ದೇಶದ ಆರೋಗ್ಯ ಹೇಗಾದರೂ ಇರಲಿ, ಅಂಕಿ ಅಂಶಗಳ ಪ್ರಕಾರ ಹಣದ ಹೆಚ್ಚಳವಾದರೆ ಸಾಕು ಅದು GDPಯ ಪ್ರಕಾರ ಪ್ರಗತಿಯ ಸಂಕೇತವಾಗಿಬಿಡುತ್ತದೆ. ಸ್ವಾಮೀಜಿಯವರು ಎತ್ತಿದ ಪ್ರಶ್ನೆ– ಪ್ರಗತಿ ಸಾಧಿಸಿದೆವು ಎಂದು ಭಾವಿಸಿದಾಕ್ಷಣ ಮನುಷ್ಯನ ಸಂತೋಷ ಹೆಚ್ಚಾಗುತ್ತದೆಯೇ ಎಂಬುದು ಇಂದಿಗೂ ನಮ್ಮನ್ನು ಕಾಡುವ ಪ್ರಶ್ನೆಯಾಗಿಯೇ ಉಳಿದಿದೆ.

ಸ್ವಾಮೀಜಿಯವರು ಕೇಳಿದ ಮತ್ತೊಂದು ಪ್ರಶ್ನೆಯ ಕುರಿತು ಈಗ ಆಲೋಚಿಸೋಣ. ಅರ್ಥಶಾಸ್ತ್ರದ ಅಂತರಂಗವನ್ನು ದಾರ್ಶನಿಕವಾಗಿ ಮಾತ್ರ ಅರಿಯಬಲ್ಲವರು ಕೇಳಬಹುದಾದ ಈ ಪ್ರಶ್ನೆಯನ್ನು ಸ್ವಾಮೀಜಿಯವರು ಬಹಳ ಹಿಂದೆಯೇ ಕೇಳಿದ್ದರು. ಇದೇ ಪ್ರಶ್ನೆಗೆ ಉತ್ತರವನ್ನು ಹುಡುಕುವ ಪ್ರಯತ್ನದಲ್ಲಿ ಶ್ರೀ ಅಮರ್ತ್ಯ ಸೇನ್ ಅವರು ನೊಬೆಲ್ ಬಹುಮಾನವನ್ನೇ ಪಡೆದರು. ಸ್ವಾಮೀಜಿ ಹೇಳುತ್ತಾರೆ, **"ಒಂದು ದೇಶ ಶ್ರೀಮಂತವಾಗಿಯೂ, ಶಕ್ತಿಶಾಲಿಯಾಗಿಯೂ ಬೆಳೆಯಬೇಕಾದರೆ ಅನಿವಾರ್ಯವಾಗಿ ಅದು ಎಲ್ಲೋ ದೂರದಲ್ಲಿರಬಹುದಾದ ಮತ್ತೊಂದು ದೇಶವನ್ನು ದುರ್ಬಲಗೊಳಿಸುತ್ತದೆ, ಬಡವಾಗಿಸುತ್ತದೆ. ಇದು ಅನಿವಾರ್ಯ."** ಅವರು ಮತ್ತೆ ಹೇಳುತ್ತಾರೆ, "ನಾವು ಕಂಡುಹಿಡಿಯುವ ಪ್ರತಿಯೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತಗೊಳಿಸುತ್ತದೆ ಎನ್ನುವುದಾದರೆ ಅದೇ ಕಾಲದಲ್ಲಿ ಅದು ಇಪ್ಪತ್ತು ಸಾವಿರ ಜನರನ್ನು ಬಡತನಕ್ಕೆ ತಳ್ಳುತ್ತದೆ. ಇದು ಎಲ್ಲೆಲ್ಲೂ ಕಂಡುಬರುವ ಸ್ಪರ್ಧೆಯ ನಿಯಮ." ಈ ವಿಚಾರದಲ್ಲಿ ಅವರ ಇನ್ನೊಂದು ಮಾತು ಹೀಗಿದೆ: "ನಮ್ಮ ಸುಖಸಾಧನೆಯ ಮಾರ್ಗಗಳನ್ನು ಹೆಚ್ಚಿಸಿದಷ್ಟೂ ನಮ್ಮ ಬೇಡಿಕೆಗಳು ಹೆಚ್ಚುತ್ತಾ ಹೋಗುತ್ತವೆ. ಈ ಬೇಡಿಕೆಗಳು ಹೆಚ್ಚಿದಂತೆ ಕೊನೆಯಿಲ್ಲದ ದಾಹ ನಮ್ಮನ್ನು ಅತೃಪ್ತರನ್ನಾಗಿ ಮಾಡುತ್ತದೆ. ಅತೃಪ್ತಿ ಮತ್ತು ಅಸಂತೋಷ ಸದಾಕಾಲವೂ ನಮ್ಮನ್ನು ಕಾಡುತ್ತದೆ."

ಭೂಮಿಯ ಅರ್ಧಗೋಳ ಶ್ರೀಮಂತವಾಗಬೇಕಾದರೆ ಉಳಿದ ಅರ್ಧಗೋಳ ಸಾಪೇಕ್ಷವಾಗಿ ಬಡತನದಲ್ಲೇ ನೆಲೆಸಬೇಕಾದ ಆರ್ಥಿಕತತ್ತ್ವವನ್ನು ಅಮರ್ತ್ಯಸೇನ್ ಪ್ರತಿಪಾದಿಸಿದ್ದರು. ಈ ಪ್ರತಿಪಾದನೆ ಅವರಿಗೆ ನೊಬೆಲ್ ಬಹುಮಾನವನ್ನು ತಂದುಕೊಟ್ಟಿತು. ಆದರೆ ಸ್ವಾಮಿ ವಿವೇಕಾನಂದರು ಇಷ್ಟು ಗಂಭೀರವಾದ ವಿಷಯವನ್ನು ನೀರುಕುಡಿದಷ್ಟು ಲೀಲಾಜಾಲವಾಗಿ ಯಾವುದೋ ಒಂದು ಭಾಷಣದ ಮಧ್ಯೆ ಹೇಳಿರುವುದು ಆಶ್ಚರ್ಯವನ್ನು ಮೂಡಿಸುತ್ತದೆ. ಸ್ವಾಮೀಜಿಯವರು ವಿವರಿಸುವ ಸಂತೋಷದ ತತ್ತ್ವ ಸರಳ ಜೀವನದಲ್ಲಿದೆ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ. ಇದನ್ನು ಗಾಂಧೀಜಿಯವರು ಸರಿಯಾಗಿ ಗುರುತಿಸಿದರು. ಮನುಷ್ಯ ತನ್ನ ಆಸೆ ಆಮಿಷಗಳನ್ನು ಹೆಚ್ಚಿಸಿಕೊಳ್ಳುತ್ತ, ಹೆಚ್ಚು, ಮತ್ತಷ್ಟು ಹೆಚ್ಚು ಎಂದು ಪಡೆಯುವ ಗೀಳನ್ನು ಬಿಡದೆ ಇದ್ದರೆ, ಅತೃಪ್ತಿ ಮತ್ತು ಅಸಂತೋಷಗಳು ಅವನ ಬೆನ್ನಟ್ಟಿ ಬರುತ್ತವೆ. ಕೃತಕವಾದ ಸಂತೋಷ ಒಂದು ಕಡೆ ಹೆಚ್ಚಾದಷ್ಟೂ ಮತ್ತೊಂದು ಕಡೆ ಅದು ಅಸಂತೋಷದ ಕೊರಕಲನ್ನು ಉಂಟುಮಾಡುತ್ತದೆ. ಏಕೆಂದರೆ ಪ್ರಪಂಚದಲ್ಲಿರುವ ಒಟ್ಟು ಶಕ್ತಿಯ ಮೊತ್ತ ಬದಲಾಗುವುದಿಲ್ಲ ಎಂದು ಸ್ವಾಮೀಜಿ ಹೇಳುತ್ತಾರೆ; ಸಾಗರದ ಅಲೆಗಳ ಉದಾಹರಣೆಯನ್ನು ನೀಡುತ್ತ, ಎತ್ತರಕ್ಕೆ ಮೇಲೆದ್ದ ಅಲೆ ಪಕ್ಕದಲ್ಲೇ ಉಂಟುಮಾಡಿದ ತಗ್ಗಿನಿಂದಾಗಿದ್ದು ಎಂಬುದನ್ನು ನಾವು ಮರೆಯುವಂತಿಲ್ಲ ಎನ್ನುತ್ತಾರೆ.

ಈ ನಿಟ್ಟಿನಲ್ಲಿ ನೋಡಿದಾಗ, ಗಾಂಧೀಜಿಯವರ ಜೀವನಸಂದೇಶವಾದ **'ಸರಳಬದುಕು'** ಎನ್ನುವುದು ಮಾತ್ರ ನಮ್ಮ ಇಂದಿನ ಎಲ್ಲ ದುರಂತಗಳಿಗೆ ಪರಿಹಾರವಾದೀತು. ಚರಿತ್ರೆ ಎಲ್ಲಾ ರೀತಿಯ ಅಭಿವೃದ್ಧಿಯ ಮಾದರಿಗಳನ್ನೂ ಪ್ರಯೋಗಿಸಿನೋಡಿದೆ. ಆದರೆ, ಗಾಂಧೀಜಿಯವರ 'ಅಹಿಂಸೆ' ಮತ್ತು 'ಸರಳ ಬದುಕು'ಗಳು ಮಾತ್ರ ಇಂದಿನ ದುರಂತಮಯ ಸನ್ನಿವೇಶದಿಂದ ನಮ್ಮನ್ನು ಪಾರುಮಾಡಬಲ್ಲವು. ಇದಕ್ಕೆ ಸ್ವಾಮಿ ವಿವೇಕಾನಂದರ ವೈಚಾರಿಕ ಹಿನ್ನೆಲೆಯೂ ಇದೆ.

## ಶ್ರೀರಾಮಕೃಷ್ಣ ಶಿಷ್ಯೋದ್ಯಾನ : ಪುಷ್ಪ ೧೩

# ಸ್ವಾಮಿ ಅಖಂಡಾನಂದ



ಡಾ. ಕೆ. ಅನಂತರಾಮು

ಎಲೆಗಳು ಹಣ್ಣಾಗಿ ಮರದಿಂದ ಉದುರುತ್ತವೆ, ಹಾಗೆ ಉದುರುವಾಗ ತಾವು ಉದುರಿದ ಜಾಗದಲ್ಲೊಂದು ಗುರುತು ಬಿಟ್ಟು ಉದುರುತ್ತವೆ. ಎಲೆಗಳ ಕಥೆಯೇ ಹೀಗಾದರೆ ಇನ್ನು ಮಹಾಪುರುಷರ ವಿಚಾರವನ್ನೇನು ಹೇಳುವುದು! ಸ್ವಾಮಿ ಅಖಂಡಾನಂದರಂತೂ ಈ ಸಂಸಾರವೃಕ್ಷದಿಂದ ಉದುರಿ ಹೋಗುತ್ತಾ ತಮ್ಮ ಲೋಕಸೇವಾ ಕಾರ್ಯಗಳಿಂದ ಗಟ್ಟಿಯಾದ ಗುರುತುಗಳನ್ನು ಬಿಟ್ಟುಹೋಗಿದ್ದಾರೆ. “ದರಿದ್ರರು, ನಿರಕ್ಷರಕುಕ್ಷಿಗಳು, ಕಷ್ಟದಲ್ಲಿ ನವೆಯುತ್ತಿರುವವರೇ ನಿನ್ನ ದೇವರಾಗಲಿ, ಅವರಿಗಾಗಿ ನೀನು ಮಾಡುವ ಸೇವೆಯನ್ನು ಶ್ರೇಷ್ಠತಮವಾದ ಪೂಜೆಯೆಂದು ತಿಳಿದುಕೋ” ಎಂದು ವಿವೇಕಾನಂದರೊಮ್ಮೆ ಹೇಳಿದ್ದನ್ನು ಅಖಂಡಾನಂದರು ತಮ್ಮ ಜೀವನಕ್ಕೆ ಅಳವಡಿಸಿಕೊಂಡು, ಕೊನೆಯುಸಿರು ಇರುವವರೆಗೂ ಅದನ್ನು ಪಾಲಿಸಿದರು.

### ನನಗೆ ಬೇಗ ಮದುವೆ ಮಾಡಿಬಿಡು

ಕೊಲ್ಕೊತ್ತೆಯ ಆಹಿರಿತೋಲಾ ಎಂಬಲ್ಲಿ ಶ್ರೀಮಂತ ಗಂಗೋಪಾಧ್ಯಾಯ, ವಾಮಾಸುಂದರಿದೇವಿ ಎಂಬ ಸಂಪ್ರದಾಯಶೀಲ ದಂಪತಿಗಳು ವಾಸವಾಗಿದ್ದರು. ಶ್ರೀಮಂತರು ಪುರೋಹಿತವೃತ್ತಿಯನ್ನು ಅವಲಂಬಿಸಿಕೊಂಡಿದ್ದರು. ಅವರಿಗೆ ಮೂವರು ಹೆಣ್ಣುಮಕ್ಕಳಾದರು. ಆಗ ಅವರು ಭಗವಂತನನ್ನು ಕುರಿತು ತಮಗೊಂದು ಗಂಡುಮಗು ಬೇಕೆಂದು ಬೇಡಿಕೊಂಡರು. ಅದರ ಫಲವಾಗಿ ಸರ್ವಲಕ್ಷಣ ಸಂಪನ್ನವಾದ ಮಗುವೊಂದು ೩೦-೦೯-೧೮೬೪ರಂದು ಜನಿಸಿತು. ಅದಕ್ಕೆ ಗಂಗಾಧರ ಗಂಗೋಪಾಧ್ಯಾಯ ಎಂದು ಹೆಸರಿಟ್ಟರು. ಆ ಮಗುವೇ ನಮ್ಮ ಕಥಾನಾಯಕ ಅಖಂಡಾನಂದರು.

ಶಾಲೆಯ ಓದಿನಲ್ಲಿಯೂ ಅವರು ಮುಂದಾಗಿದ್ದರು. ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಸಾಧುಸಂತರ ಸಂಗ ಅವರಿಗೆ ಬಾಲ್ಯದಿಂದಲೇ ಪ್ರಿಯವಾಗಿತ್ತು. ದಿವ್ಯಕ್ಷೇತ್ರಗಳ ವೈಭವವನ್ನು ಸಾಧುಗಳು ಬಣ್ಣಿಸುವಾಗ ಅಖಂಡಾನಂದರು, “ಆಹಾ, ಆ ದಿವ್ಯಧಾಮಗಳನ್ನೆಲ್ಲ ನಾನು ನೋಡುವುದು ಯಾವಾಗ” ಎಂದು ಕನಸು ಕಾಣುತ್ತಿದ್ದರು. ಉಪನಯನವಾದ ಮೇಲಂತೂ ಅತ್ಯಂತ ಕಠಿಣವಾದ ಬ್ರಹ್ಮಚರ್ಯದ ಜೀವನಕ್ಕೆ ತಮ್ಮನ್ನು ಒಡ್ಡಿಕೊಂಡರು. ದಿನಕ್ಕೆ ನಾಲ್ಕು ಬಾರಿ ಸ್ನಾನ ಮಾಡುತ್ತಿದ್ದರು. ಸರಳವಾದ ಊಟವನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಪ್ರಾಣಾಯಾಮ, ಜಪತಪಪೂಜಾತತ್ಪರರಾಗುತ್ತಿದ್ದರು. ಅವರ ಈ ಆಚಾರಶೀಲತೆಯಿಂದ ಬೆರಗಾಗಿದ್ದ ವಿವೇಕಾನಂದರು ‘ನೀನು ಗಂಗಾನದಿಯಷ್ಟು ಪವಿತ್ರನಾದವನು’ ಎಂಬರ್ಥದಲ್ಲಿ ವಿನೋದಕ್ಕಾಗಿ ‘ಗ್ಯಾಂಜಸ್’ ಎಂದು ಕರೆಯುತ್ತಿದ್ದರು. ಮಗನ ಆಧ್ಯಾತ್ಮಿಕ ಒಲವನ್ನು ಕಂಡ ತಾಯಿ ವಾಮಾಸುಂದರಿಯು, ಆಗ ಬಾಲ್ಯವಿವಾಹವು ಪ್ರಚಲಿತವಾಗಿದ್ದುದರಿಂದ ಬೇಗನೆ ಮದುವೆಮಾಡಿ ಗೃಹಸ್ಥ ಜೀವನಕ್ಕೆ ಕಟ್ಟಿಹಾಕಬೇಕೆಂದು ಕಾತರಿಸಿದಳು. ಅದನ್ನರಿತ ಅಖಂಡಾನಂದರು, “ಅಮ್ಮಾ, ನನಗೆ ಬೇಗ ಮದುವೆ ಮಾಡಿಬಿಡು, ನಿನ್ನ ಜೊತೆಗೆ ನನಗೆ ಇನ್ನೊಬ್ಬ ತಾಯಿ ಮನೆಗೆ ಬರಲಿ, ನಿನ್ನ ಅಡಿಗೆ ಕೆಲಸಕ್ಕೆ ಅವಳೂ ನೆರವಾಗುತ್ತಾಳೆ” ಎಂದರು. ಹೆಂಡತಿಯನ್ನು ತಾಯಿಯಂತೆ ಕಾಣುವ ಈ ಹುಡುಗನಿಗೆ ಮದುವೆಮಾಡಿ ಪ್ರಯೋಜನವೇನು ಎಂದು ಅರ್ಥಮಾಡಿಕೊಂಡು ಅಲ್ಲಿಗೆ ಆ ವಿಚಾರವನ್ನೇ ತಾಯಿ ಕೈಬಿಟ್ಟಳು.

### ಅನಿಕೇತನ ಪ್ರವೃತ್ತಿ

ಅಖಂಡಾನಂದರಿಗೆ ಬಾಲ್ಯದಿಂದಲೇ ಮುನ್ನುಗ್ಗುವ ಪ್ರವೃತ್ತಿ ಮತ್ತು ಅನಿಕೇತನ ಪ್ರವೃತ್ತಿ ಮೈಗೂಡಿಬಂದಿತ್ತು. ಒಮ್ಮೆ ಮೈಯಲ್ಲಿ ಜ್ವರ ಕುದಿಯುತ್ತಿದ್ದರೂ ಅಕ್ಕನ ಮುಂದೆ ಬಾಳೇಹಣ್ಣು ತಿಂದು, ಅವಳು ತಾಯಿಗೆ ಹೇಳಿ ಬೈಸುತ್ತಾಳೆಂದು, ಶ್ಮಶಾನಕ್ಕೆ ಓಡಿಬಿಟ್ಟರು. ಮೂರು ದಿನಗಳ ಬಳಿಕ ಮರಳಿ

ಬಂದು, ವಿಷಯ ತಿಳಿದಾಗ, "ನಿನಗೆ ಭಯವಾಗಲಿಲ್ಲವೇ ಮಗುವೆ" ಎಂದು ತಾಯಿ ಕೇಳಿದಳು. ಆಗ ಅಖಂಡಾನಂದರು, "ನನಗೇನೂ ಭಯವಾಗಲಿಲ್ಲವಮ್ಮಾ, ಆದರೆ ನನ್ನ ಜೊತೆಯಲ್ಲಿದ್ದ ಜ್ವರಕ್ಕೆ ಭಯವಾಗಿ ಅದು ಓಡಿಹೋಯಿತು" ಎಂದು ಹೇಳಿದರು. ಇನ್ನೊಮ್ಮೆ ಹೇಳಕೇಳದೆ ಉದಾಸೀಪಂಥದ ಸಂನ್ಯಾಸಿಯೊಬ್ಬನ ಬೆನ್ನುಹತ್ತಿ ಒಂದಷ್ಟು ಕಾಲ ದೇಶಕೋಶಗಳನ್ನು ಸುತ್ತಿಬಂದರು. "ಎಲ್ಲಿ ಹೋದನೋ ಈ ನನ್ನ ತುಂಟ ಮಗನು" ಎಂದು ವಾಮಾಸುಂದರಿಯು ಹತ್ತಾರು ಪುಣ್ಯಕ್ಷೇತ್ರಗಳನ್ನು ಹುಡುಕಿಕೊಂಡು ಅಲೆದಾಡಿದಳು. ಬೇಸತ್ತು ಮನೆಗೆ ಹಿಂದಿರುಗುವ ಹೊತ್ತಿಗೆ ಅಖಂಡಾನಂದರೂ ಹಿಂತಿರುಗಿದ್ದರು. "ಹೀಗೆ ಕಣ್ಣೀರು ಸುರಿಸಲೆಂದೇ ನಾನು ನಿನ್ನನ್ನು ಬೇಡಿ ಪಡೆದೆನೆ ಮಗುವೇ" ಎಂದು ತಾಯಿ ದುಃಖಪಟ್ಟುಕೊಂಡಳು. ಆಗ ಅಖಂಡಾನಂದರು, "ಈಗ ತಾನೇ ಏನಾಯಿತು ಬಿಡು, ನನ್ನನ್ನು ಹಡೆದುದರಿಂದಲೇ ಅಲ್ಲವೇ ನಿನಗೆ ಅನಾಯಾಸವಾಗಿ ತೀರ್ಥಯಾತ್ರೆಯ ಭಾಗ್ಯ ಒದಗಿ ಬಂದುದು" ಎಂದು ವಿನೋದದಲ್ಲಿಯೇ ತೇಲಿಸಿಬಿಟ್ಟರು.

೧೮೮೩ರಲ್ಲಿ ತಮ್ಮ ೧೯ನೆಯ ವಯಸ್ಸಿನಲ್ಲಿ ಅಖಂಡಾನಂದರು ದಕ್ಷಿಣೇಶ್ವರದಲ್ಲಿ ಪರಮಹಂಸರ ದರ್ಶನ ಪಡೆದುಕೊಂಡರು. ಆ ಧೀರಯುವಕನನ್ನು ನೋಡುತ್ತಿದ್ದಂತೆಯೇ ಪರಮಹಂಸರು ಪರಮಾನಂದಭರಿತರಾದರು. ಎರಡನೆಯ ಭೇಟಿಯಲ್ಲಿಯೇ ಅವರ ನಾಲಗೆಯ ಮೇಲೆ ಮಂತ್ರಾಕ್ಷರಗಳನ್ನು ಬರೆದು ಸಂಪೂರ್ಣವಾಗಿ ತಮ್ಮೊಳಕ್ಕೆ ಸೆಳೆದುಕೊಂಡುಬಿಟ್ಟರು. ಅಖಂಡಾನಂದರನ್ನು ನೀನು ಪೂರ್ವಕಾಲದವನು ಎಂದು ಹೇಳುತ್ತಾ ಪರಮಹಂಸರು, "ನೀನಿನ್ನೂ ಯುವಕ, ಇಷ್ಟೊಂದು ಕಠಿಣವ್ರತವೇಕೆ, ಆ ನರೇಂದ್ರನನ್ನು ನೋಡು, ದಿನಕ್ಕೆ ಹತ್ತಾರು ಸಲ ಎಲೆ ಅಡಿಕೆ ಅಗಿಯುತ್ತಾನೆ, ಸಿಕ್ಕಿಸಿಕ್ಕಿದ್ದು ತಿನ್ನುತ್ತಾನೆ. ಆದರೇನು, ಕೊಲ್ಕತ್ತೆಯ ಬೀದಿಗಳಲ್ಲಿ ಅಲೆಯುವಾಗ ಎಲ್ಲವನ್ನೂ ಬ್ರಹ್ಮಮಯವಾಗಿ ಕಾಣುತ್ತಾನೆ. ಅವನನ್ನು ನೀನೊಮ್ಮೆ ಭೇಟಿಯಾಗು" ಎಂದು ಅವರನ್ನು ವಿವೇಕಾನಂದರೊಡನೆ ಜೋಡಿಸಿದರು. ಆ ಮೂಲಕ ಸಮಾನ ವಯಸ್ಕರಾದ ಅವರಿಬ್ಬರೂ ಗೆಳೆಯರಾದರು. ಮತ್ತೆ ಅಖಂಡಾನಂದರು ಪರಮಹಂಸರನ್ನು ಕಂಡಾಗ, "ಅವನ ವಿಚಾರದಲ್ಲಿ ನೀವು ಹೇಳಿದ್ದೆಲ್ಲವೂ ಸತ್ಯ, ಅವನ ಕಾಂತಿಪೂರ್ಣವಾದ ಕಣ್ಣುಗಳೇ ಎಲ್ಲವನ್ನೂ ಹೇಳಿಬಿಟ್ಟವು" ಎಂದು ವರದಿಯೊಪ್ಪಿಸಿದಾಗ ಅವರು ಸಂತೋಷಪಟ್ಟುಕೊಂಡರು.

ಪರಮಹಂಸರ ಸೇವಾಭಾಗ್ಯವನ್ನು ದೊರಕಿಸಿಕೊಂಡ ಅಖಂಡಾನಂದರು ಅದರ ಮೂಲಕ ತಮ್ಮ ಬದುಕು ಬಂಗಾರವಾಯಿತೆಂದು ತೃಪ್ತಿಪಟ್ಟುಕೊಂಡರು. ಪರಮಹಂಸರ ಕಾಲುಗಳನ್ನು ಒತ್ತುವುದೇನು, ಅವರಿಗೆ ಕಲ್ಲಂಗಡಿಹಣ್ಣು ತಂದುಕೊಡುವುದೇನು, ಅವರಿಗೆ ಮಂಜುಗಡ್ಡೆ ಒದಗಿಸಿಕೊಡುವುದೇನು! ಹೀಗೆ ಸೇವೆಮಾಡುತ್ತಲೇ ಆ ಸದ್ಗುರುವಿನ ಹೃದಯ ಸಿಂಹಾಸನವನ್ನು ಹೊಕ್ಕು, ಅವರ ಪ್ರೇಮಾಮೃತದಲ್ಲಿ ಮಿಂದು ಪುನೀತರಾದರು.

## ಚರನ್ ವೈ ಮಧುವಿಂದತಿ

ಪರಮಹಂಸರ ದೇಹತ್ಯಾಗದ ಬಳಿಕ ಅಖಂಡಾನಂದರು ಸಂನ್ಯಾಸಿಯಾಗುವ ತಮ್ಮ ನಿರ್ಧಾರವನ್ನು ತಮ್ಮ ತಂದೆತಾಯಿಗಳಿಗೆ ತಿಳಿಸಿ ಗೃಹತ್ಯಾಗ ಮಾಡಿಬಿಟ್ಟರು. ಅವರ ಅದಮ್ಯವಾದ ತೀರ್ಥಯಾತ್ರೆಯ ಆಕಾಂಕ್ಷೆಗೆ ತುದಿ ಮೊದಲೆಂಬುದೇ ಇರಲಿಲ್ಲ. ಅವರು ಮೊದಲಬಾರಿಗೆ ಹಿಮಾಲಯದ ದಿವ್ಯಧಾಮಗಳಿಗೆ ಯಾತ್ರೆ ಹೊರಟಾಗ ತಂದೆತಾಯಿಗಳ ಆಶೀರ್ವಾದಕ್ಕೆ ಪಾತ್ರರಾದರು. "ನಿನಗೆ ಶ್ರೇಯಸ್ಸಾಗಲಿ ಮಗುವೆ ಹೋಗಿ ಬಾ, ನಿನ್ನ ಆಧ್ಯಾತ್ಮಿಕ ಆಕಾಂಕ್ಷೆ ಈಡೇರಲಿ, ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಪರಮಾತ್ಮನಲ್ಲಿ ನಿನ್ನ ಶ್ರದ್ಧೆ ಅಚಲವಾಗಿರಲಿ" ಎಂದು ತಂದೆ ಅಶ್ರುಪೂರ್ಣಲೋಚನರಾಗಿಯೇ ಆಶೀರ್ವದಿಸಿದರು. ತಾಯಿಗೂ ಅತ್ತು ಅತ್ತು ಕಣ್ಣೀರು ಬತ್ತಿಹೋಯಿತು. ಆ ಮುಹೂರ್ತದಲ್ಲಿ ಕರುಣಾಮಯಿಯಾದ ಅಖಂಡಾನಂದರ ಮನಸ್ಸೂ ಕರಗಿಹೋಯಿತು.

ದಿವ್ಯಧಾಮಗಳಲ್ಲಿ ಸಂಚರಿಸುತ್ತ ಅಖಂಡಾನಂದರು ಹೃಷೀಕೇಶದಲ್ಲಿ ಮಾಯಾರಾಮನೆಂಬ ಅವಧೂತನನ್ನು ಕಂಡರು. "ನೀನು ಹಿಮಾಲಯವನ್ನು ಯಾವ ಮಾರ್ಗವಾಗಿ ಏರಬೇಕೆಂದಿದ್ದೀಯಪ್ಪಾ" ಎಂದು ಆ ಅವಧೂತನು ಕೇಳಿದನು. ಆಗ ಅಖಂಡಾನಂದರು "ಆ ಮಾರ್ಗ ಈ ಮಾರ್ಗವೆಂದೇನೂ ಇಲ್ಲ ಬಾಬಾ, ಒಂದರ ಮೇಲೊಂದರಂತೆ ಶಿಖರಗಳನ್ನು ಏರುತ್ತಾ ಹೋಗುತ್ತೇನೆ" ಎಂದು ಉತ್ತರಿಸಿದರು. ಆ ಮಾತನ್ನು ಕೇಳುತ್ತಿದ್ದಂತೆಯೇ ಅವಧೂತನು ಆಶ್ಚರ್ಯಭರಿತನಾಗಿ ಅಲ್ಲಿದ್ದವರನ್ನೆಲ್ಲ ಹತ್ತಿರ ಕರೆದು, "ಇಲ್ಲಿ ಬನ್ನಿ, ಈ ಬಂಗಾಳಿ ಹುಡುಗ ಏನು ಹೇಳುತ್ತಿದ್ದಾನೆಂಬುದನ್ನು ಸ್ವಲ್ಪ ಕೇಳಿಸಿಕೊಳ್ಳಿ. ಹಾಗೆ ಹೇಳುವ ಧೈರ್ಯ ಅವನಿಗೆ ಎಲ್ಲಿಂದ ಬಂದಿದೆ ಗೊತ್ತೇ, ಅಂತಹ ಸದ್ಗುರುವಿನ ಅನುಗ್ರಹ ಅವನಿಗಾಗಿದೆ" ಎಂದು ಕೊಂಡಾಡಿದನು. ಅದೆಷ್ಟೋ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ಗುಪ್ತಕಾಶಿ ಎಂಬಲ್ಲಿಗೆ ಹೋದಾಗ ಈ ಹಿಂದೆ ತಾವು ಬೆನ್ನುಹತ್ತಿ ಅಲೆದಿದ್ದ ಉದಾಸೀಪಂಥದ ಸಾಧುವಿನ ದರ್ಶನವಾಯಿತು. "ನಾನು ಹೇಳಿದ್ದಂತೆಯೇ ನೀನು ಸಂನ್ಯಾಸಿಯಾಗಿಬಿಟ್ಟೆಯಲ್ಲಾ, ಬಹಳ ಸಂತೋಷ, ನಿನಗೆ ಮಂಗಳವಾಗಲಿ" ಎಂದು ಆತನು ಸಂಭ್ರಮದಿಂದ ಹೇಳಿದನು. ಆಗ ಅಖಂಡಾನಂದರು, "ಎಲ್ಲವೂ ನಿಮ್ಮ ಆಶೀರ್ವಾದ ಬಾಬಾ" ಎಂದು ವಿನಯದಿಂದ ಬಾಗಿದರು. ತ್ರಿಯುಗೀನಾರಾಯಣವೆಂಬ ಕ್ಷೇತ್ರದಲ್ಲಿ ಅನಾದಿಕಾಲದಿಂದ ಅಗ್ನಿಕುಂಡವೊಂದು ಉರಿಯುತ್ತಲೇ ಇದೆ. ಎಲ್ಲರಂತೆ ಅಖಂಡಾನಂದರೂ ಅದರ ಪವಿತ್ರ ಭಸ್ಮವನ್ನು ಪೂಸಿಕೊಂಡರು.

ಅಖಂಡಾನಂದರು ಕೈಲಾಸ ಮಾನಸಸರೋವರಯಾತ್ರೆಯನ್ನು ಯಶಸ್ವಿಯಾಗಿ ನೆರವೇರಿಸಿಕೊಂಡರು. ಪರ್ವತಾವಳಿಗಳ ವೈಭವದಿಂದ ಅವರು ಮೈಮರೆತುಬಿಟ್ಟರು. "ಸಮಸ್ತ ಬ್ರಹ್ಮಾಂಡವೇ ಅನಂತ ಜಲರಾಶಿಯಲ್ಲಿ ಮುಳುಗಿಹೋದರೂ ಹಿಮಾಲಯವು ಮಾತ್ರ ಸದಾಕಾಲ ನನ್ನ ಕಣ್ಣಮುಂದೆ ಹೊಳೆಯುತ್ತಿರುತ್ತದೆ. ಅದರ ಅಲೌಕಿಕ ಸೌಂದರ್ಯವನ್ನು ನಾನು ವರ್ಣಿಸಲಾರೆ. ನಾನು ಸಂಪೂರ್ಣವಾಗಿ ಆ ಆನಂದದಲ್ಲಿ ಕರಗಿಹೋದೆ. ಅದು ದೇವತೆಗಳ ಸನ್ನಿಧಿಯಲ್ಲವೇ, ಶಿವಪಾರ್ವತಿಯರ ಲೀಲಾಭೂಮಿಯಲ್ಲವೇ, ನಶ್ವರ ಜಗತ್ತಿನ ದುಃಖಗಳೆಲ್ಲ ಮರೆಯಾಗಿ ಹೋದುವು" ಎಂಬ ಅವರ ವರ್ಣನೆ ಮೆಲುಕುಹಾಕುವಂತಿದೆ. ಅರಣ್ಯವೈಭವ, ಪುಷ್ಪವೈಭವ, ಹಿಮವೈಭವ, ಮೌನವೈಭವ, ಶಿಖರವೈಭವ, ಜಲವೈಭವ ಮತ್ತು ವನಸ್ಪತಿವೈಭವಗಳೆಂಬ ಸಪ್ತವೈಭವಗಳಿಂದ ಅಲ್ಲಿ ಪರಬ್ರಹ್ಮವೇ ಪರ್ವತಾಕಾರವಾಗಿದೆಯೆಂದು ಅವರು ಪರಿಭಾವಿಸಿದರು. ಅವರು ಬರೆದಿರುವ ರಸಮಯವಾದ ಪ್ರವಾಸ ಕಥನವೊಂದು ಇತ್ತೀಚಿಗೆ ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಕಡೆಯಿಂದ ಕನ್ನಡದಲ್ಲಿ 'ಹಿಮಾಲಯದ ಮಡಿಲಲ್ಲಿ' ಎಂದು (೨೦೧೧) ಅನುವಾದಗೊಂಡು ಪ್ರಕಟವಾಗಿದೆ.

ಟಿಬೆಟ್ ಮುಟ್ಟಿದ ಅಖಂಡಾನಂದರು ಸ್ವಲ್ಪಕಾಲ ಲಾಮಾ ಸಂನ್ಯಾಸಿಗಳ ಮಠದಲ್ಲಿ ನೆಲೆಸಿದರು. ಅವರಿಂದ ಟಿಬೆಟ್ ಭಾಷೆಯನ್ನು ಕಲಿತುಕೊಂಡರು. ಅಷ್ಟುಮಾತ್ರವಲ್ಲದೆ ಆ ಭಾಷೆಯ ಬಲದಿಂದ ಬೌದ್ಧಗ್ರಂಥಗಳ ಅಧ್ಯಯನ ನಡೆಸಿದರು. ಮಂಜು ಎಂದರೆ, ಹಿಮ ಎಂದರೆ ಅವರು ಲೆಕ್ಕಕ್ಕೇ ಇಟ್ಟುಕೊಂಡಿರಲಿಲ್ಲ. ಹೀಗಾಗಿ ಅವರು ಮಂಜುಗಡ್ಡೆಯ ಬಾಬಾ ಎಂದೇ ಆ ಸುತ್ತಿನಲ್ಲಿ ಪ್ರಸಿದ್ಧರಾದರು. ತಮ್ಮ ಹಿಮಾಲಯದ ಮತ್ತು ಟಿಬೆಟ್‌ನ ಅನುಭವಗಳನ್ನೆಲ್ಲ ಅವರು 'ಸ್ಮೃತಿಕಥಾ', 'ಟಿಬೆಟೇರ್ ಪಥೇ ಹಿಮಾಲಯೇ' ಎಂಬ ಕೃತಿಗಳಲ್ಲಿ ರೋಮಾಂಚಕಾರಿಯಾಗಿ ಬಣ್ಣಿಸಿದ್ದಾರೆ. **'ಚರನ್ ವೈ ಮಧು ವಿಂದತಿ'** – ಸಂಚರಿಸುವವನು ಜೇನನ್ನು ಸಂಗ್ರಹಿಸುತ್ತಾನೆ ಎಂಬ ವಾಣಿ ಅವರ ವಿಚಾರದಲ್ಲಿ ಚರಿತಾರ್ಥವಾಯಿತು.

## ಅಪೂರ್ವ ಸನ್ನಿವೇಶಗಳು

ಅಖಂಡಾನಂದರಲ್ಲಿ ಸುತ್ತುಬಳಸಿನ ಮಾತುಗಳಿರಲಿಲ್ಲ. ತಮಗೆ ಸರಿತೋರಿದ್ದನ್ನು ಮುಚ್ಚುಮರೆಯಿಲ್ಲದೆ ನೇರವಾಗಿ ಹೇಳಿಬಿಡುತ್ತಿದ್ದರು. ಖೇತ್ರಿ ಮಹಾರಾಜರಾದ ರಾಜಾ ಅಜಿತ್ ಸಿಂಗರ ಸಭೆಯಲ್ಲಿ ಅಖಂಡಾನಂದರು ಸಂದರ್ಭವಶದಿಂದ ವೇದಾಂತದ ವಿಚಾರಗಳನ್ನು ತಿಳಿಸಿಕೊಡುತ್ತಿದ್ದರು. ಒಂದು ದಿನ ಸಭಾಸದರಲ್ಲೊಬ್ಬನು "ನಮ್ಮ ದೊರೆಗಳಿಗೆ ವೇದಾಂತದ ಸಾರಸರ್ವಸ್ವವೂ ಗೊತ್ತು" ಎಂದು ಜಂಬದ ದನಿಯಲ್ಲಿ ಹೇಳಿಬಿಟ್ಟನು. ಆ ಮಾತಿನಿಂದ ಕೆರಳಿದ ಸ್ವಾಮಿಗಳು "ವೇದಾಂತವೆಂದರೆ ಏನು ತಿಳಿದೆ? ಒಬ್ಬ ಸಂನ್ಯಾಸಿಯೇ ಎಂಬತ್ತು ವರ್ಷ ಓದಿದರೂ ವೇದಾಂತದಲ್ಲಿ ಪಾರಂಗತನಾಗಲಾರನೆಂದಮೇಲೆ ವಿಲಾಸವಿನೋದಗಳಲ್ಲಿಯೇ ಮುಳುಗಿರುವ ನಿಮ್ಮ ದೊರೆಗಳು ವೇದಾಂತವನ್ನೆಲ್ಲ ಹೇಗಯ್ಯ ಕಲಿತಿರಲು ಸಾಧ್ಯ" ಎಂದು ದೊರೆಯ ಮುಂದೆಯೇ ಗುಡುಗಿದರು. ಆಗ ದೊರೆಗಳು ಆ ಮಾತನ್ನು ಒಪ್ಪಿಕೊಂಡು "ತಾವು ಸರಿಯಾಗಿಯೇ ಹೇಳಿದಿರಿ ಮಹಾರಾಜ್" ಎಂದು ತಮ್ಮ ಸದ್ಗುಣವನ್ನು ಮೆರೆದರು.

## ದೇಶಸೇವಾಯೋಗ

ಮೂರೂವರೆ ವರ್ಷಗಳ ಕಾಲ ವಿವಿಧ ಪುಣ್ಯಧಾಮಗಳ ದರ್ಶನವನ್ನು ಮುಗಿಸಿ, ಅಖಂಡಾನಂದರು ತಮ್ಮ ಬಾಲ್ಯದ ಕನಸನ್ನು ನನಸಾಗಿಸಿಕೊಂಡು, ೧೮೯೦ರ ಜೂನ್ ತಿಂಗಳಿನಲ್ಲಿ ಕೊಲ್ಕೊತ್ತೆಯ ವರಾಹನಗರದ ಮಠಕ್ಕೆ ಹಿಂತಿರುಗಿಬಂದರು. ತಮ್ಮ ಸಾಹಸ ಪ್ರವಾಸಗಾಥೆಯನ್ನೆಲ್ಲ ಗುರುಭಾಯಿಗಳ ಮುಂದೆ ಬಿತ್ತರಿಸಿ ಅವರನ್ನೆಲ್ಲ ಮುದಗೊಳಿಸಿದರು. ಶಾಸ್ತ್ರೀಯವಾಗಿ ಸಂನ್ಯಾಸಾಶ್ರಮವನ್ನು ಹೊಕ್ಕು ವಿವೇಕಾನಂದರಿಂದಲೇ 'ಅಖಂಡಾನಂದ' ಎಂಬ ಆಶ್ರಮನಾಮವನ್ನು ಪಡೆದುಕೊಂಡರು. ಅವರು ಕೈಗೊಂಡ ಯಾತ್ರೆಗಳಿಗೆ ಲೆಕ್ಕವೇ ಇಲ್ಲ. ಮೂರು ಬಾರಿ ಟಿಬೆಟ್ ಯಾತ್ರೆ ಮಾಡಿದರು. ಒಮ್ಮೆಯಂತೂ ಕೆಲವು ಲಾಮಾಗಳ ಭೋಗಜೀವನವನ್ನು ವಿರೋಧಿಸಿ, ಅವರಿಂದ ಚಿತ್ರಹಿಂಸೆಗೂ ಒಳಗಾದರು. ವಿವೇಕಾನಂದರೊಡನೆಯೂ ಒಂದಷ್ಟು ಕ್ಷೇತ್ರಗಳನ್ನು ಸುತ್ತಿದರು.

ದೇಶಸಂಚಾರಕಾಲದಲ್ಲಿ ಗ್ರಾಮಜೀವನದ ಬಡತನ, ಅನಕ್ಷರತೆ, ರೋಗರುಜಿನಗಳನ್ನು ಕಂಡು ಅಖಂಡಾನಂದರು ದುಃಖತಪ್ತರಾದರು. ಏನಾದರೂ ಪರಿವರ್ತನೆಯನ್ನು ತರಬೇಕೆಂದು ತಮ್ಮ ಸೇವಾಯಾತ್ರೆಯನ್ನು ಮುಂದುವರಿಸಿದರು. ಖೇತ್ರಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿ ಶಾಲೆಗಳು ತೆರೆಯುವಂತೆ ಮಾಡಿದರು.

ಅಖಂಡಾನಂದರು ಮುರ್ಷಿದಾಬಾದ್ ಪ್ರದೇಶದಲ್ಲಿ ಸಂಚರಿಸುತ್ತಾ, ದೌಡ್‌ಪುರ ಎಂಬ ಗ್ರಾಮದ ಪೇಟೆಯಲ್ಲಿ ಸಾಗುತ್ತಿರುವಾಗ, ಮುಸ್ಲಿಂ ಬಾಲೆಯೊಬ್ಬಳು ತನ್ನ ಮಡಕೆ ಒಡೆದುಹೋಯಿತೆಂದೂ ಮನೆಗೆ ಹೋದರೆ ತಾಯಿ ಹೊಡೆಯುತ್ತಾಳೆಂದೂ ನೆಲದ ಮೇಲೆ ಬಿದ್ದು ಗೋಳಾಡುತ್ತಿದ್ದಳು. ಅದನ್ನು ಕಂಡ ಅಖಂಡಾನಂದರ ಹೃದಯ ಕರಗಿತು. ಆಗ ಅವರ ಬಳಿ ಇದ್ದುದು ನಾಲ್ಕಾಣೆ ಮಾತ್ರ. ಅದರಲ್ಲಿಯೇ ಮಡಕೆಯನ್ನು ತೆಗೆಸಿಕೊಟ್ಟರು. ಅಂಗಡಿಯಲ್ಲಿ ಕಡಲೇಪುರಿ ತೆಗೆಸಿಕೊಟ್ಟರು. ಆ ಹೊತ್ತಿಗೆ ಅಲ್ಲಿ ತಮ್ಮನ್ನು ಸುತ್ತಿಕೊಂಡ ಮಕ್ಕಳಿಗೂ ಉಳಿದ ಹಣದಿಂದ ಕಡಲೆಪುರಿ ಹಂಚಿಕೊಟ್ಟರು. ಆ ಊರು ಬಿಟ್ಟು ಮುಂದೆ ಸಾಗುತ್ತಿರುವಾಗ ಯಾರೋ ಹೆಂಗಸೊಬ್ಬಳು ಓಡೋಡಿ ಬಂದು "ಗಯಾವೈಷ್ಣವಿ ಸಾಯಲು ಬಿದ್ದಿದ್ದಾಳೆ. ಅವಳಿಗೆ ಯಾರೂ ಇಲ್ಲ. ನೀವೊಮ್ಮೆ ಬರುತ್ತೀರಾ, ಬಾಬಾ" ಎಂದು ಬೇಡಿಕೊಂಡಳು. ವೈಷ್ಣವಿಯೋ

ಹಣ್ಣುಹಣ್ಣು ಮುದುಕಿಯಾಗಿದ್ದಳು. ಅಖಂಡಾನಂದರು ಓಡಿಹೋಗಿ ಅವಳನ್ನು ಉಪಚರಿಸಿದರು. ಊರಿನ ಜಮೀನುದಾರನನ್ನು ಬೇಡಿ ಅವಳಿಗೆ ನಿತ್ಯಾಹಾರದ ವ್ಯವಸ್ಥೆ ಮಾಡಿಸಿದರು. ಮಧ್ಯಾಹ್ನದ ವೇಳೆಗೆ ಅವಳು ಸ್ವಲ್ಪ ಚೇತರಿಸಿಕೊಂಡಾಗ ತಾವೇ ಆಕೆಗೆ ಊಟ ಮಾಡಿಸಿದರು. ಆಗ ವೃದ್ಧೆಯು ಕೃತಜ್ಞತೆಯಿಂದ ಕಣ್ಣೀರು ಹರಿಸುತ್ತ "ನೀನು ಯಾವ ಜನ್ಮದಲ್ಲಿ ನನ್ನ ಮಗನಾಗಿದ್ದೆಯೋ ಕಾಣೆ" ಎಂದಳು. ಆಗ ಅಖಂಡಾನಂದರು, "ಯಾವ ಜನ್ಮದಲ್ಲೇನು ತಾಯೆ, ಈ ಜನ್ಮದಲ್ಲಿಯೇ ನಾನು ನಿನ್ನ ಮಗನಾಗಿದ್ದೇನೆ" ಎಂದು ಮನಮುಟ್ಟುವ ಮಾತು ಹೇಳಿದರು.

ಸ್ವಾಮಿ ಅಖಂಡಾನಂದರು ಅಲ್ಲಿಗೆ ಹತ್ತಿರದ ಸಾರಗಾಛಿ ಎಂಬಲ್ಲಿ ಒಂದು ಅನಾಥಾಲಯವನ್ನೂ ವೃತ್ತಿಶಿಕ್ಷಣಶಾಲೆಯನ್ನೂ ತೆರೆದು, ೧೯೧೩ ರಲ್ಲಿ ಅದಕ್ಕೊಂದು ಸ್ವತಂತ್ರವಾದ ಕಟ್ಟಡವನ್ನೂ ನಿರ್ಮಿಸಿದರು. ಹಲವು ವರ್ಷಗಳು ಅಲ್ಲಿಯೇ ನೆಲೆಸಿ ಅನಾಥಮಕ್ಕಳನ್ನು ಮೇಲೆ ತಂದರು. ಭೀಕರ ಬರಗಾಲ ೧೮೯೭ ರಲ್ಲಿ ಆವರಿಸಿದಾಗ ಮುರ್ಷಿದಾಬಾದ್ ಪರಿಸರದ ಅನೇಕ ಗ್ರಾಮಗಳಿಗೆ ದವಸಧಾನ್ಯಗಳನ್ನು ಸಂಗ್ರಹಿಸಿ ತಂದು ಹಸಿವಿನಿಂದ ಸಾಯುತ್ತಿದ್ದವರಿಗೆ ಹಂಚಿಕೊಟ್ಟರು. ೧೮೯೯ ರಲ್ಲಿ ಭಾಗಲ್ಪುರಜಿಲ್ಲೆಯ ಗೋಘೂ ಎಂಬಲ್ಲಿ ಪ್ರವಾಹದಿಂದ ಜನರು ಕಂಗೆಟ್ಟಾಗ ಅವರಿಗೆ ಅನ್ನಬಟ್ಟೆ ವಸತಿಗಳನ್ನು ಕಲ್ಪಿಸಿಕೊಟ್ಟರು. ೧೯೩೪ರಲ್ಲಿ ಬಿಹಾರದಲ್ಲಿ ಭೂಕಂಪದಿಂದ ಅನಾಹುತವಾದಾಗ ಸ್ವಾಮಿಗಳು ತಮ್ಮ ಸಹಾಯಹಸ್ತವನ್ನು ಚಾಚಿದರು. ಅಖಂಡಾನಂದರು ಹೋಮಿಯೋಪತಿ ವೈದ್ಯವನ್ನು ಕಲಿತಿದ್ದರು. ಕೋಲ್ಕೊತಾ, ಮಾಹುಲಾ ಪರಿಸರಗಳಲ್ಲಿ ಕಾಲರಾ ಪ್ಲೇಗು ಮಲೇರಿಯಾ ಸಿಡುಬುಮಾರಿಗಳು ಕಾಡಿದಾಗ, ಪ್ರಾಣಭಯವನ್ನು ತೊರೆದು ರೋಗಿಗಳ ಸೇವೆ ಮಾಡಿದರು.

ರಾಮಕೃಷ್ಣಮಠದ ಜವಾಬ್ದಾರಿಯನ್ನೂ ಹೊತ್ತು ೧೯೩೪ ರಿಂದ ಮೂರು ವರ್ಷಗಳ ಕಾಲ ಅದರ ಅಧ್ಯಕ್ಷರಾಗಿದ್ದುಕೊಂಡು ಸೇವೆ ಸಲ್ಲಿಸಿದರು. ಆಗಲೂ ಅಖಂಡಾನಂದರು ತಮ್ಮ ಸೇವಾಕಾರ್ಯಗಳನ್ನು ಕೈಬಿಡಲಿಲ್ಲ. ಸ್ತ್ರೀಶಿಕ್ಷಣದ ಬಗ್ಗೆ ಚಿಂತನೆ ನಡೆಸಿ, ಅವರಿಗೆ ನೀಡುವ ಶಿಕ್ಷಣವು ಅವರ ಗೃಹಕೃತ್ಯಗಳಿಗೆ ಪೂರಕವಾಗಿರಬೇಕೆಂದು ಪ್ರತಿಪಾದಿಸಿದರು. ೪೦ ವರ್ಷಗಳಷ್ಟು ದೀರ್ಘಕಾಲ ಅಖಂಡಾನಂದರು ಎಣೆಯಿಲ್ಲದಷ್ಟು ಸೇವಾಕಾರ್ಯಗಳನ್ನು ಮಾಡಿ ಕೃತಾರ್ಥರಾದರು.

### ಸಾರಗಾಛಿಯ ನೋವುನಲಿವುಗಳು

ಕೊಲ್ಕೊತ್ತೆಯಿಂದ ನೂರು ಮೈಲಿ ದೂರದ ಸಾರಗಾಛಿ ಆಶ್ರಮದಲ್ಲಿ ಜಾತಿಭೇದವಿಲ್ಲದೆ ಹಿಂದೂಮುಸಲ್ಮಾನಾದಿ ಎಲ್ಲ ಜಾತಿಯ ಮಕ್ಕಳನ್ನೂ ಪೋಷಿಸಿದರು. ಅವರಿಗೆ ವಿದ್ಯೆ ಕಲಿಸಿದರು, ಕೈಕಸುಬು ಕಲಿಸಿದರು, ಬದುಕುವ ದಾರಿಯನ್ನು ತೋರಿಕೊಟ್ಟರು. ಆ ಪೈಕಿ ಬಹದ್ದೂರ್ ಎಂಬ ಗೂರ್ಖಾ ಬಾಲಕನೂ ಒಬ್ಬನಾಗಿದ್ದನು. ಅವನು ಅಖಂಡಾನಂದರನ್ನು ತುಂಬಾ ಹಚ್ಚಿಕೊಂಡಿದ್ದನು. "ಈ ಆಶ್ರಮದಲ್ಲಿರುವ ಹುಡುಗರು ದೊಡ್ಡವರಾದ ಮೇಲೆ ಎಲ್ಲೆಲ್ಲಿಗೋ ಹೊರಟು ಹೋಗುತ್ತಾರೆ ಬಾಬಾ, ಆದರೆ ನಾನು ಮಾತ್ರ ಇಲ್ಲಿಯೇ ಇದ್ದುಕೊಂಡು ನಿಮ್ಮ ಸೇವೆಮಾಡುತ್ತ ನಿಮಗೆ ಶಾಂತಿಯನ್ನೂ ವಿಶ್ರಾಂತಿಯನ್ನೂ ಉಂಟುಮಾಡಿಕೊಡುತ್ತೇನೆ" ಎಂದು ಅವನು ಹೇಳುತ್ತಿದ್ದನು. ಆದರೆ ಆ ಬಾಲಕನು ವಿಧಿಲಿಖಿತದಂತೆ ಕ್ಷಯರೋಗಕ್ಕೆ ಬಲಿಯಾಗಿಬಿಟ್ಟನು. ಮರಣಕಾಲದಲ್ಲಿ "ನನ್ನ ದೇಹವು ಮಾತ್ರವೇ ಸಾಯುತ್ತಿದೆ, ನನ್ನ ಆತ್ಮ ಅಮರ" ಎಂದು ಹೇಳುತ್ತಾ ಕೊನೆಯುಸಿರೆಳೆದನು. ಆಮೇಲೆ ಅಖಂಡಾನಂದರು "ಈ ಕಿರಿಯ ವಯಸ್ಸಿಗೇ ಅದೆಂತಹ ವಿವೇಕ ! ಮುಂದೆ ಆಶ್ರಮಕ್ಕೆ ಒಂದು ಆಧಾರಸ್ತಂಭವಾಗಲಿದ್ದವನನ್ನು ನಾನು ಕಳೆದುಕೊಂಡುಬಿಟ್ಟೆ" ಎಂದು ಪರಿತಪಿಸಿದರು.

ಮುಂದೆ ಕೆಲವು ಬಾಲಕರು ಸ್ವಾಮಿಗಳಿಗೆ ಹೇಳದೆ ಕೇಳದೆ ಆಶ್ರಮವನ್ನು ತೊರೆದು ಎತ್ತಲೋ ಓಡಿಹೋದರು. ಅದರಿಂದ ಅಖಂಡಾನಂದರಿಗೆ ತೀವ್ರವಾದ ವೇದನೆಯಾಯಿತು. "ತಂದೆತಾಯಿಗಳು ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕೋ, ಅದಕ್ಕಿಂತ ಹೆಚ್ಚು ಪ್ರೀತಿಯಿಂದ ನೋಡಿಕೊಂಡೆನಲ್ಲ, ಮಮತೆಯೆಂಬುದೇ ಬೇಡವೇ, ಕೃತಜ್ಞತೆಯೆಂಬುದೇ ಬೇಡವೇ" ಎಂದು ಮಾನಸಿಕವಾಗಿ ಕುಗ್ಗಿ ಕುಸಿದುಹೋದರು. ಆ ಹೊತ್ತಿನಲ್ಲಿ ಪರಮಹಂಸರೇ ಕಾಣಿಸಿಕೊಂಡು "ಜಗತ್ತಿನ ವ್ಯವಹಾರವೇ ಹೀಗೆ, ಯಾರಿಗೆ ಯಾರೂ ಇಲ್ಲ. ಅವರಿಗೆ ಅನ್ನಬೇಕಾಗಿತ್ತು, ಬಟ್ಟೆಬೇಕಾಗಿತ್ತು. ಏನಾದರೂ ಕೆಲಸ ಮಾಡಿ ಹೊಟ್ಟೆ ತುಂಬಿಸಿಕೊಳ್ಳಬೇಕಾಗಿತ್ತು. ಬೀದಿಯಲ್ಲಿ ಬಿದ್ದಿದ್ದವರನ್ನು ನೀನು ಎತ್ತಿತಂದು ಸಾಕಿದೆಯಲ್ಲವೇ, ಅಷ್ಟೇ ಅವರ ಹಣೆಬರಹ, ಅದಕ್ಕಾಗಿ ದುಃಖಿಸಬೇಡ" ಎಂದು ಸಂತೈಸಬೇಕಾಯಿತು. ಎಲ್ಲ ಕಷ್ಟಗಳನ್ನೂ ದುಃಖಗಳನ್ನೂ ಅಖಂಡಾನಂದರು ಸದ್ಗುರುವಿನ ಸ್ಮರಣೆಯಿಂದಲೇ ನಿವಾರಿಸಿಕೊಳ್ಳುತ್ತಿದ್ದರು. ಸದ್ಗುರುನಾಥನ ದಿವ್ಯಸ್ಪರ್ಶವೇ ನಮ್ಮನ್ನೆಲ್ಲ ಅಮೃತಾತ್ಮರನ್ನಾಗಿ ಮಾಡಿದೆ ಎಂದು ಅವರು ಹೇಳುತ್ತಿದ್ದರು.

ಇಷ್ಟೆಲ್ಲ ಸೇವಾಕಾರ್ಯಗಳನ್ನು ಮಾಡಿಯೂ ಅವರು ಕೆಲವು ದುರಾಚಾರಿಗಳಿಂದ ಹಿಂಸೆಯನ್ನು ಅನುಭವಿಸಬೇಕಾಯಿತು, ನಿಂದೆ-ಅಪಪ್ರಚಾರಗಳನ್ನು ನುಂಗಿಕೊಳ್ಳಬೇಕಾಯಿತು. ಕಾಫಿಯಲ್ಲಿ ಜಾಪಾಳದ ವಿಷವನ್ನು ಬೆರೆಸಿಕೊಟ್ಟು ಅವರನ್ನು ಕೊಲ್ಲುವ ಯತ್ನಗಳೂ ನಡೆದುವು. ಸಾರಗಾಛಿಯಲ್ಲಿದ್ದಾಗಲೇ ಅಖಂಡಾನಂದರ ದೇಹಾರೋಗ್ಯ ಕುಸಿದುಹೋಯಿತು. ವಿಶ್ರಾಂತಿಗಾಗಿ ಅವರನ್ನು ಬೇಲೂರುಮಠಕ್ಕೆ ಕರೆತರಲಾಯಿತು. ಅವರ ಪ್ರಯಾಣಕಾಲ ಬಂದೇಬಿಟ್ಟಿತು. ಅದನ್ನವರು ಪೂರ್ವಭಾವಿಯಾಗಿಯೇ ಹೇಳಿಯೂಬಿಟ್ಟರು. "ನನ್ನನ್ನು ಪ್ರೀತಿಸಿದವರಿಗೂ ದ್ವೇಷಿಸಿದವರಿಗೂ, ನನಗೆ ಸಹಾಯ ಮಾಡಿದವರಿಗೂ ಮಾಡದಿದ್ದವರಿಗೂ – ಎಲ್ಲರಿಗೂ ಒಳ್ಳೆಯದಾಗಲಿ" ಎಂದು ಹಾರೈಸುತ್ತ, ೧೯೩೭ರ ಫೆಬ್ರವರಿ ೭ ರಂದು